**ದಿನಾಂಕಃ 20-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಎ.ಎಸ್. ವಕೀಲರಿಂದಃ**

1 ರಿಂದ 6 ನೇ ಪ್ರತಿವಾದಿಯರು 7 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಮಾರಿದ ನಂತರ ನಾನು ಈ ದಾವೆ ಹಾಕಿರುತ್ತೇನೆ ಎಂದರೆ ಸಾಕ್ಷಿ ಮೊದಲು ಒಪ್ಪಿಕೊಂಡು ನಂತರ ಇಲ್ಲ ಎಂದು ಹೇಳುತ್ತಾರೆ. 1 ರಿಂದ 6 ನೇ ಪ್ರತಿವಾದಿಯರು ನಮಗೆ ಲಾವಣಿ ಹಾಕಿದ್ದಾರಾ ಎಂಬ ಪ್ರಶ್ನೇಗೆ 40 ವರ್ಷದಿಂದ ಲಾವಣಿ ಹಾಕಿದ್ದರು ಎಂದು ಹೇಳುತ್ತಾರೆ. ಲಾವಣಿ ಹಾಕಿದ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. 1 ರಿಂದ 6 ನೇ ಪ್ರತಿವಾದಿಯರು ಮತ್ತು 1 ನೇ ಪ್ರತಿವಾದಿಯ ಗಂಡ 40 ವರ್ಷದಿಂದ ಲಾವಣಿ ಹಾಕಿದ್ದರು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 6 ನೇ ಪ್ರತಿವಾದಿಯರಿಗೆ ನಾವು ಲಾವಣಿ ಹಾಕಲು ಜಮೀನು ಕೇಳಿದಾಗ ಅವರು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಮ್ಮಿಬ್ಬರ ಮಧ್ಯೆ ದೊಡ್ಡ ಜಗಳವಾಯಿತು ಎಂದರೆ ಸರಿಯಲ್ಲ. ನನ್ನ ಗಂಡ 1 ನೇ ಪ್ರತಿವಾದಿಯ ಗಂಡನಿಗೆ ಅವಾಚ್ಯವಾಗಿ ಬೈದರು ಎಂದರೆ ಸರಿಯಲ್ಲ. ಈ ದ್ವೇಷದಿಂದ ನಾನು ಇಸ್ಮಾಯಿಲ್, ಜಾಬೀರ್ ಮತ್ತು ಹಜರತ್ ಅಲಿರೊಂದಿಗೆ ವಿಲಾಪೆಯಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಈ ವ್ಯಾಜ್ಯ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ 1 ರಿಂದ 6 ನೇ ಪ್ರತಿವಾದಿಯರಿಗೆ ಖರೀದಿ ಕೊಡಲು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಮೊದಲು ನಾನು ಪ್ರತಿವಾದಿಯರಿಗೆ ನೋಟಿಸ್ಸು ಕೊಟ್ಟಿದ್ದೆ ಎಂದರೆ ನಿಜ. ನಿಪಿ-10 ರಲ್ಲಿ ಯಾವ ದಿನಾಂಕ ವ್ಯವಹಾರ ಆಯಿತು ಮತ್ತು ಯಾವ ದಿನಾಂಕ ವ್ಯವಹಾರ ಆಯಿತು ಎಂದು ನಮೂದು ಮಾಡಿದ್ದರು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ದಿನಾಂಕಃ 14.12.2012 ರಲ್ಲಿ ವ್ಯವಹಾರ ಆಗಿದೆ ಎಂದು ಬರೆಸಿರುತ್ತೇವೆ

ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 14.12.2014 ರಲ್ಲಿ ವ್ಯವಹಾರ ಆಗಿದೆ ಎಂದು ಹೇಳಿರುತ್ತೇನೆ ಎಂದರೆ ನಿಜ. ನಾನು ಪ್ರತಿವಾದಿ 1 ರಿಂದ 6 ರೊಂದಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 7 ಮತ್ತು 8 ರ ಪರಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.